# ಮಾವಿನ ಹೊಲ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸೋಣ ಕ್ರಾಂತಿಕಾರಿ ಹೋರಾಟವನ್ನು ವಿಸ್ತಾರಗೊಳಿಸುತ್ತಾ ತೀವ್ರಗೊಳಿಸೋಣ.

ಅವರಿಗಾಗಿ ಬೆನ್ನತ್ತಿದರು, ಕುತಂತ್ರ ಹೆಣೆದರು, ದೊಡ್ಡ ಪಡೆ ತೆಗೆದುಕೊಂಡು ಆಧುನಿಕ ಶಸ್ತ್ರಗಳೊಂದಿಗೆ ಹೊಂಚು ಹಾಕಿ ಕುಳಿತು ಕಾದು ಹೊಡೆದರು. ಮೂಡಿಗೆರೆಯ ಮೇರುತಿ ಪ್ರದೇಶದ ಜನರ ಮಧ್ಯೆ ಓಡಾಡಿ ಅವರ ಕಷ್ಟ ಸುಖಗಳನ್ನು ವಿಚಾರಿಸುತ್ತಾ ಪರಿಹಾರಕ್ಕಾಗಿ ಶ್ರಮಿಸುತ್ತಾ ಜನರ ಪ್ರೀತಿ ಅಭಿಮಾನಕ್ಕೆ ಪಾತ್ರರಾಗಿದ್ದ ಮೂವರು ಅಮೂಲ್ಯ ಕ್ರಾಂತಿಕಾರಿಗಳ ಜೀವಗಳನ್ನು ತೆಗೆಯಿತು ರಾಜ್ಯದ ಬಿ.ಜೆ.ಪಿ. ಸರ್ಕಾರ. ಅವರ್‍ಯಾರೂ ಅಪರಾಧಿಗಳಾಗಿರಲಿಲ್ಲ. ಯಾರಿಗೂ ಕೇಡುಕನ್ನು ಬಯಸಿದವರಾಗಲೀ ಮಾಡಿದವರಾಗಲಿ ಅಲ್ಲ. ಹೀಗಿದ್ದರೂ ಈ ಸಾಮಾಜಿಕ ವ್ಯವಸ್ಥೆ ಅವರನ್ನು, ಅವರು ಮಾಡುತ್ತಿರುವ ಜನಪರ ಕೆಲಸಗಳನ್ನು, ಅವರ ಪ್ರಾಮಾಣಿಕತೆ ಬದ್ಧತೆಗಳನ್ನು ಸಹಿಸದಾಯಿತು. ಜನರನ್ನು ಪ್ರಜ್ಞಾವಂತರನ್ನಾಗಿಸುವುದು ಆಳುವ ವರ್ಗಗಳಿಗೆ ಯಾವಾಗಲೂ ಸಹಿಸಲು ಸಾಧ್ಯವಾಗುವುದಿಲ್ಲ. ಇದು ಚರಿತ್ರೆಯಿಂದಲೂ ಮುಂದುವರಿದುಕೊಂಡು ಬಂದಿರು ವಂತಹದ್ದೇ ಆಗಿದೆ. ಆದರೆ ಜನರ ಕ್ರಾಂತಿಕಾರಿ ಹೋರಾಟಗಳನ್ನು ಸದೆಬಡಿದು ನಿಲ್ಲಿಸಲು ಸಾಧ್ಯವಿಲ್ಲ ಎಂಬುದನ್ನು ಚರಿತ್ರೆ ಸ್ಪಷ್ಟಪಡಿಸಿದೆ. ಅಸಮಾನತೆ, ಶೋಷಣೆ, ದಮನ, ದೌರ್ಜನ್ಯ ಸಮಾಜದಲ್ಲಿ ಇರುವವರೆಗೂ ಅಂತಹ ಸಮಸ್ಯೆಗಳಿಂದ ನರಳುತ್ತಿರುವ ಬಹು ಸಂಖ್ಯಾತರಾಗಿರುವ ಜನರು ಆರ್ತನಾದ, ಸಿಟ್ಟು, ರೋಷಗಳನ್ನು ಒಟ್ಟಾಗಿಸಿ ಹೊರಹಾಕಲೇ ಬೇಕಾಗುತ್ತದೆ. ಗಂಟಲು ಹಿಸುಕಿ, ಗುಂಡಿಗಳಿಗೆ ಹೊಡೆದು, ತಲೆ ತೆಗೆದು ಜನರ ಹೋರಾಟವನ್ನು ನಿಲ್ಲಿಸಲು ಸಾಧ್ಯವಿಲ್ಲ. ಇಂದು ಕಾ॥ ಮನೋಹರ್, ಕಾ॥ ದೇವಯ್ಯ ಹಾಗೂ ಕಾ॥ ರವಿ ನಮ್ಮೊಡನೆ ಇಲ್ಲದಿರಬಹುದು. ಆದರೆ ಅವರು ಮೂಡಿಸಿದ ಪ್ರಜ್ಞೆ, ಅವರು ಬದ್ಧರಾಗಿದ್ದ ಸಿದ್ಧಾಂತ, ಅವರ ರಾಜಿರಹಿತ ಆಚಣೆ, ಅವರ ತ್ಯಾಗ ಬಲಿದಾನಗಳು, ಅವರ ಆಶಯಗಳು ಜನರ ಜೊತೆ ಎಂದೆಂದೂ ಇರುತ್ತದೆ.

# ಸದಾ ಕ್ರಿಯಾಶೀಲ, ಚುರುಕುತನದ ನಗು ಮುಖದ ಸಂಗಾತಿ.

## ಕಾಮ್ರೇಡ್ ಮನೋಹರ್

ಕಾ॥ ಮನೋಹರ್ ಶಿವಮೊಗ್ಗ ಜಿಲ್ಲೆಯ ಸೊರಬದವರು, ಮಧ್ಯಮ ರೈತರ ಹಿನ್ನಲೆಯ ಮನೋಹರ್ ಶಿವಮೊಗ್ಗದ ಹಿಂದುಳಿದ ವರ್ಗಗಳ ಹಾಸ್ಟೆಲಿನಲ್ಲಿ ಇದ್ದು ಸಹ್ಯಾದ್ರಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿದವರು. ಶಿವಮೊಗ್ಗದಲ್ಲಿ ಆಗ ಸಕ್ರಿಯವಾಗಿದ್ದ ಪ್ರಗತಿಪರ ವಿದ್ಯಾರ್ಥಿ ಕೇಂದ್ರದಲ್ಲಿ ಕಾರ್ಯಕರ್ತರಾಗಿ ಕೆಲಸ ಮಾಡಿದ್ದರು. ಕ್ರಾಂತಿಕಾರಿ ವಿಚಾರ ಧಾರೆಗಳನ್ನು ಅರ್ಥಮಾಡಿಕೊಂಡು ಅದು ಕೇವಲ ಮಾತಿನಲ್ಲಿ ಮಾತ್ರ ಇದ್ದರೆ ಸಾಲದೆಂದು, ಸಾಮಾಜಿಕ ಬದಲಾವಣೆಗಾಗಿ ಸ್ವತಃ ಆಚರಣೆಯಲ್ಲಿ ತೊಡಗಿದರು. ಶಿವಮೊಗ್ಗದ ಹಲವಾರು ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೂ ವಿದ್ಯಾರ್ಥಿಗಳನ್ನು ಸಂಘಟಿಸಿದರು. ಕೊಳಚೆ ಪ್ರದೇಶದ ಜನರನ್ನು ಸಂಘಟಿಸಲು ಕೆಲಸ ಮಾಡಿದರು. ಅಂದಿನ ಸಿ.ಪಿ.ಐ. (ಎಂ.ಎಲ್) (ಪೀಪಲ್ಸ್‌ವಾರ್) ಪಕ್ಷದ ಸದಸ್ಯರಾದರು. ಅಲ್ಪಕಾಲಾವಧಿಯಲ್ಲೇ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾದರು. ಪಕ್ಷದ ಏರಿಯಾ ಸಮಿತಿಯ ಸದಸ್ಯರಾಗಿ ಬೆಳವಣಿಗೆ ತಂದುಕೊಂಡರು. ರಾಯಚೂರಿನ ಗ್ರಾಮೀಣ ರೈತ-ಕೂಲಿಗಳನ್ನು ಸಂಘಟಿಸುವ ಜವಾಬ್ದಾರಿ ವಹಿಸಿಕೊಂಡರು. ಆ ಕೆಲಸದಲ್ಲಿ ತೊಡಗಲು ಆರಂಭಿಸಿದಾಗಲೇ ಆಕಸ್ಮಿಕವಾಗಿ ಆಂಧ್ರ ಪೋಲಿಸರ ಬಂಧನಕ್ಕೆ ಒಳಗಾದರು. ಮಾಡದ ಆರೋಪಗಳನ್ನು ಹೊರಿಸಿ ಸುಳ್ಳುಗಳನ್ನು ಹೆಣೆದು 4 ವರ್ಷಗಳ ಕಾಲ ಅಕ್ರಮವಾಗಿ ಅವರನ್ನು ಬಂಧನದಲ್ಲಿ ಇರಿಸಲಾಯಿತು. ನಂತರ ಕ್ರೂರ ಪೊಲೀಸರು ಮಾಡಿದ ಯಾವ ಆರೋಪಗಳೂ ಸಾಬೀತಾಗದೆ ಬಿಡುಗಡೆ ಮಾಡಬೇಕಾಯಿತು.

ಜೈಲಿನಲ್ಲಿದ್ದಾಗ ಅಲ್ಲಿನ ಖೈದಿಗಳ ಕಷ್ಟ ಸುಖಗಳನ್ನು ಹಂಚಿಕೊಂಡು ಅವರೊಂದಿಗೆ ಬೆರೆತು, ಜೈಲಲ್ಲಿ ಅವರು ಎದುರಿಸುತ್ತಿರುವ ನರಕಯಾತನೆ ಹೋಗಲಾಡಿಸಲು ನಿರಂತರವಾಗಿ ಶ್ರಮಿಸಿದರು. ಖೈದಿಗಳನ್ನು ಸಂಘಟಿಸಿ ಹಲವಾರು ಹೋರಾಟಗಳನ್ನು ನಡೆಸುವಲ್ಲಿ ಪಾತ್ರ ವಹಿಸಿದರು. ಖೈದಿಗಳನ್ನು ಪ್ರಜ್ಞಾವಂತರನ್ನಾಗಿಸಲು ನಿರಂತರವಾಗಿ ಶ್ರಮಿಸಿದರು. ಚರ್ಲಪಲ್ಲಿ, ಬಳ್ಳಾರಿ ಹಾಗೂ ಗುಲ್ಬರ್ಗದ ಕೇಂದ್ರೀಯ ಕಾರಾಗೃಹದಲ್ಲಿನ ಖೈದಿಗಳೆಲ್ಲರ ಪ್ರೀತಿ ಪಾತ್ರಕ್ಕೆ ಕಾ॥ ಮನೋಹರ್ ಒಳಗಾಗಿದ್ದರು. ಖೈದಿಗಳೆಲ್ಲರ ಜೀವನಗಾಥೆಗಳನ್ನು ಕೇಳಿ ತಿಳಿದುಕೊಂಡು ನಂತರ 'ಜೈಲ್ ಕಿ ಕಹಾನಿ' ಎಂಬ ದೀರ್ಘ ಲೇಖನ ಸರಣಿಯನ್ನು ಶಿವಮೊಗ್ಗದ 'ಎಚ್ಚರಿಕೆ ಪತ್ರಿಕೆಯಲ್ಲಿ ಬರೆದರು. ಜೈಲಿನೊಳಗಿನಿಂದಲೂ ಹಲವಾರು ಪತ್ರಿಕೆಗಳಿಗೆ ಹಲವು ಲೇಖನಗಳನ್ನು ಬರೆದರು. ಅವರ ಲೇಖನಗಳು 'ಹೊಸತು, ವಾರ್ತಾಭಾರತಿ, ಸಂವಾದ' ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಎಲ್ಲಾ ಲೇಖನಗಳೂ ಶೋಷಿತ ಜನರ

ದನಿಯಾಗಿದ್ದವು. ಆ ಲೇಖನಗಳು, ವರ್ಗಸಮಾಜದಲ್ಲಿ ಜೈಲುಗಳು ಹೇಗೆ ದುಡಿಯುವ ಜನರನ್ನು ವಿನಾಕಾರಣ ಕೊಳೆ ಹಾಕುತ್ತವೆ, ಶೋಷಕರಿಗೆ ಲೂಟಿಕೋರರಿಗೆ ಆಳುವ ವರ್ಗಗಳಿಗೆ ಹೇಗೆ ಸೇವೆ ಸಲ್ಲಿಸುತ್ತವೆ ಎಂಬುದನ್ನು ಉದಾಹರಣೆಗಳ ಸಹಿತ ಬಿಡಿಸಿಟ್ಟವು. ಜೈಲಿನಿಂದ ಬಿಡುಗಡೆಯಾದ ಕೂಡಲೇ ಜನರೊಂದಿಗೆ ನಿಂತರು. ಹೋರಾಟಗಳಿಗೆ ಜನರನ್ನು ಸಂಘಟಿಸುವ ಕೆಲಸ ಮುಂದುವರಿಸಿದರು. ಜೈಲುಗಳನ್ನೂ, ಕೋರ್ಟುಗಳನ್ನೂ ವರ್ಗ ಹೋರಾಟದ ಕುಲುಮೆಯನ್ನಾಗಿ ಮಾಡಿದ ಕಾ॥ ಮನೋಹರ್ ವರ್ಗ ರಾಜಕೀಯ ಹಾಗೂ ವರ್ಗ ಸಂಘರ್ಷದ ಹಾದಿಯಲ್ಲಿ ಮತ್ತಷ್ಟು ದೃಢವಾಗಿ ಮುನ್ನಡೆದರು. 'ಎಚ್ಚರಿಕೆ' ಪತ್ರಿಕೆಯಲ್ಲಿ ಪತ್ರಕರ್ತರಾಗಿ ಕೆಲಸ ಮಾಡುತ್ತಾ ನಿರಂತರವಾಗಿ ಹೋರಾಟ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಿಂದೂ ಫ್ಯಾಸಿಸಂ ವಿರುದ್ಧ, ಜನರ ಒಕ್ಕಲೆಬ್ಬಿಸುವಿಕೆ ವಿರುದ್ಧ, ಕೊಳಚೆ ಜನರನ್ನು ನಿರ್ವಸಿತರನ್ನಾಗಿ ಮಾಡುವುದರ ವಿರುದ್ಧ, ಆದಿವಾಸಿ ರೈತ–ಕೂಲಿ ಜನರ ಮೇಲಿನ ಶೋಷಣೆ ವಿರುದ್ಧ, ಹೀಗೆ ಎಲ್ಲಾ ಹೋರಾಟಗಳಲ್ಲೂ ಸಕ್ರಿಯರಾಗಿದ್ದು ಮಾತ್ರವಲ್ಲದೆ ಸಂಘಟಿಸುವಲ್ಲೂ ಒಂದು ಪ್ರಮುಖ ಪಾತ್ರ ವಹಿಸಿದರು.

ಕಾ॥ ಮನೋಹರ್‌ರ ಜನಪರ ಕಾರ್ಯಗಳು ಹಾಗೂ ರಾಜಿರಹಿತ ನಿಲುವುಗಳನ್ನು ಸಹಿಸಲಾಗದ ಈ ವ್ಯವಸ್ಥೆ ಮತ್ತದರ ಹಂತಕ ಪಡೆಗಳು ಅವರಿಗೆ ನಿರ್ಬಂಧ ಹೇರಲು ಪ್ರಯತ್ನಿಸುತ್ತಾ ಬಂದರು.

ಶಿವಮೊಗ್ಗದ ಆಗಿನ ಎಸ್.ಪಿ. ಅರುಣ್ ಚಕ್ರವರ್ತಿ ಪದೇಪದೇ ಕರೆಸುತ್ತಾ ಪರೋಕ್ಷ ಹಾಗೂ ಪ್ರತ್ಯಕ್ಷ ಬೆದರಿಕೆ ಹಾಕುತ್ತಿದ್ದನು. ಪ್ರಜಾತಾಂತ್ರಿಕ ಜನಪರ ಇತ್ಯಾದಿ ಪದಗಳಿಗೆ ಈ ವ್ಯವಸ್ಥೆಯಲ್ಲಿ ಅರ್ಥವೇ ಇರುವುದಿಲ್ಲ. ಆಳುವ ಶೋಷಕರಿಗೆ ಅನುಕೂಲವಾಗಿದ್ದಲ್ಲಿ ಮಾತ್ರ ಪ್ರಜಾತಾಂತ್ರಿಕ ಎಂಬುದೇ ಈ ವ್ಯವಸ್ಥೆಯ ನಿಜವಾದ ಮುಖವಾಗಿದೆ. ಹಾಗಾಗಿ ಯಾರು ಪ್ರಾಮಾಣಿಕವಾಗಿ ಜನರ ಪರವಾಗಿ ಕೆಲಸ ಮಾಡಲು ಹೋರಾಡುತ್ತಾರೋ ಅವರನ್ನು ತಡೆಯಲು ನಿರ್ಬಂಧಿಸಲು ಈ ವ್ಯವಸ್ಥೆಯ ಆಡಳಿತ ಯಂತ್ರಾಂಗಗಳೂ ಸೇರಿದಂತೆ ಎಲ್ಲವೂ ಪ್ರಯತ್ನಿಸುತ್ತವೆ. ಅದ್ಯಾವುದಕ್ಕೂ ಮಣಿಯದೆ ಇದ್ದಲ್ಲಿ ಇದ್ದೇ ಇದೆಯಲ್ಲ ಸುಳ್ಳು ಕೇಸುಗಳು, ಅಕ್ರಮ ಬಂಧನಗಳು, ಜೈಲುಗಳಲ್ಲಿ ಕೊಳೆ ಹಾಕುವುದು. ಅದಕ್ಕೂ ಬಗ್ಗದಿದ್ದಲ್ಲಿ ಸುಳ್ಳು ಎನ್‌ಕೌಂಟರ್‌ಗಳು.

ಕಾ॥ ಮನೋಹರ್ ಪೋಲೀಸರು ಹಾಗೂ ಸ್ಥಾಪಿತ ಹಿತಾಸಕ್ತಿಗಳು ಒಡ್ಡಿದ ಯಾವುದೇ ಬೆದರಿಕೆಗಳಿಗೆ ಸೊಪ್ಪು ಹಾಕದೆ ತಮ್ಮ ಜನಪರ ಹೋರಾಟಗಳಲ್ಲಿ ಮುಂದುವರಿದಾಗ ಅವರನ್ನು ಮತ್ತೊಮ್ಮೆ ಸುಳ್ಳು ಕೇಸುಗಳಡಿ ಜೈಲುಪಾಲು ಮಾಡುವ ಕುತಂತ್ರವನ್ನು ಪೋಲೀಸರು ಮಾಡತೊಡಗಿದರು. ಇದನ್ನು ಅರ್ಥ ಮಾಡಿಕೊಂಡು ಅವರು ಕೂಡಲೆ ಭೂಗತರಾಗಿ ದೃಕ್ಪಥ ಪ್ರದೇಶದಲ್ಲಿ

ಪಕ್ಷ ವಹಿಸಿದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜಿಲ್ಲಾ ಸಮಿತಿ ಸದಸ್ಯರಾಗಿ ಬೆಳವಣಿಗೆ ತಂದುಕೊಂಡಿದ್ದ ಅವರು ಮಲೆನಾಡು ಏರಿಯಾ ಸಮಿತಿ ಕಾರ್ಯದರ್ಶಿಯಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದರು.

ಸಂಗಾತಿಗಳಿಗೆ, ಜನರಿಗೆ ರಾಜಕೀಯ ಸೈದ್ಧಾಂತಿಕ ವಿಚಾರಗಳನ್ನು ಅರ್ಥ ಮಾಡಿಸಲು ಸದಾ ಮುಂದಿದ್ದರು. ವರ್ಗ ರಾಜಕೀಯ ಹಾಗೂ ವರ್ಗ ಹೋರಾಟದ ಸ್ಪಷ್ಟತೆ ಅವರಿಗಿತ್ತು. ಎಲ್ಲಾ ವಿಚಾರಗಳನ್ನು ವರ್ಗ ದೃಷ್ಟಿಕೋನದೊಂದಿಗೆ ನೋಡಿ ತಪ್ಪು ವಿಚಾರಗಳ ಬಗ್ಗೆ ಸಂಘರ್ಷ ನಡೆಸಲು ಹಿಂದೆಮುಂದೆ ನೋಡುತ್ತಿರಲಿಲ್ಲ. ಪಕ್ಷದ ವೇದಿಕೆಗಳಲ್ಲಿ ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಮಂಡಿಸುತ್ತಿದ್ದರು. ಸಂಗಾತಿಗಳ ಬಗ್ಗೆ ಪ್ರೀತಿಯಿಂದ ಕಾಳಜಿ ವಹಿಸುತ್ತಾ ಅವರೊಂದಿಗೆ ತಾವೂ ಕೆಲಸಕಾರ್ಯಗಳಲ್ಲಿ ತೊಡಗುತ್ತಾ ಹುರಿದುಂಬಿಸುತ್ತಿದ್ದರು. ಪೋಲಿಸರು ನೀಡಿದ್ದ ಚಿತ್ರ ಹಿಂಸೆಗಳ ಪರಿಣಾಮವಾಗಿ ಸೊಂಟ ನೋವಿನಿಂದ ಬಳಲುತ್ತಿದ್ದರೂ ಲೆಕ್ಕಿಸದೆ ಎಲ್ಲಾ ಕೆಲಸಗಳಲ್ಲೂ ಮುಂದಿರುತ್ತಿದ್ದರು. ವರ್ಗ ಶತ್ರುಗಳ ಬಗ್ಗೆ ಸ್ಪಷ್ಟ ದೃಢ ನಿಲುವನ್ನು ತೆಗೆದುಕೊಳ್ಳುತ್ತಿದ್ದರು. ಅವರು ಒಬ್ಬ ಉತ್ತಮ ಸಂಘಟಕರಾಗಿ ಅಪ್ರತಿಮ ಕ್ರಾಂತಿಕಾರಿ ಯೋಧರಾಗಿದ್ದರು. ಪೊಲೀಸರು ಒಡ್ಡಿದ್ದ ಯಾವುದೇ ಬೆದರಿಕೆಗಳಿಗೂ ಬಗ್ಗದೆ ದೃಢವಾಗಿ ಜನರ ಪರವಾಗಿ ನಿಂತಿದ್ದರು. ಮನೆಯಲ್ಲಿ ಅವರಿಗೆ ಸಾಕಷ್ಟು ಆಸ್ತಿ ಇದ್ದರೂ ಅದನ್ನೆಲ್ಲಾ ತೊರೆದು ಜನರಿಗಾಗಿ ತಮ್ಮ ಉಸಿರು ಇರುವವರೆಗೂ ಹೋರಾಡಿದರು. ಗೆರಿಲ್ಲಾ ಯುದ್ಧದ ರಣರಂಗದಲ್ಲೇ ಅಮೂಲ್ಯ ಪ್ರಾಣವನ್ನು ಜನರಿಗಾಗಿ ಅರ್ಪಿಸಿದರು. ಈ ವ್ಯವಸ್ಥೆಯ ನರಹಂತಕ ಪೊಲೀಸ್ ಅಧಿಕಾರಿಗಳು ಮಹಾನ್ ದೇಶಪ್ರೇಮಿ ಕ್ರಾಂತಿಕಾರಿಯನ್ನು ಗುಂಡಿಟ್ಟು ಕೊಂದು ಈ ದೇಶ ಯಾರದು, ಈ ವ್ಯವಸ್ಥೆ ಎಂತಹದ್ದು ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ.

## ಶೋಷಣೆ ವಿರುದ್ಧ ದೃಢ ನಿಲುವಿನ ಸೌಮ್ಯ ಸ್ನೇಹಜೀವಿ ಕಾಮ್ರೇಡ್ ದೇವಯ್ಯ

ಕಾ॥ ದೇವಯ್ಯ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ದಿಣ್ಣೇಕರೆಯ ಬಳಿ ಅರೆಹಳ್ಳಿ ಕಾಲನಿಯವರು. ಗ್ರಾಮ ಕಿರುಗುಂದ. ಕೂಲಿ ಮಾಡಿಕೊಂಡು ಜೀವನ ನಡೆಸುತ್ತಿದ್ದ ದಲಿತ ಕುಟುಂಬದಲ್ಲಿ ಹುಟ್ಟಿ ಬಿ.ಎ. ಪದವಿ ವ್ಯಾಸಂಗ ಮಾಡಿದ್ದರು. ಮೊದಲಿನಿಂದಲೂ ಜನಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ವಿದ್ಯಾರ್ಥಿ ದೆಸೆಯಿಂದಲೇ ಶೋಷಿತ ಜನರ ಬಗ್ಗೆ, ಅನಿಷ್ಟ ಜಾತಿ ಪದ್ಧತಿ ಬಗ್ಗೆ ಅನುಭವಿಸಿ ಅದನ್ನು ಹೋಗಲಾಡಿಸುವ ಪಣತೊಟ್ಟು ಸಂಘಟಿಸಲು ತೊಡಗಿದ್ದರು. ದಲಿತ ಚಳುವಳಿಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು.

ಹಿಂದೂ ಫ್ಯಾಸಿಸಂ ವಿರುದ್ಧ, ದಲಿತರ ಮೇಲಿನ ದೌರ್ಜನ್ಯದ ವಿರುದ್ಧ, ತತ್ಕೊಳ ಒಕ್ಕಲೆಬ್ಬಿಸುವಿಕೆ ವಿರುದ್ಧ, ಸಾರಗೋಡು, ಕುಂದೂರು ಜನರನ್ನು ಒಕ್ಕಲೆಬ್ಬಿಸುವುದರ ವಿರುದ್ಧ, ಸಾಮ್ರಾಜ್ಯ ಶಾಹಿ ಯೋಜನೆಗಳ ವಿರುದ್ಧದ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ವಿದ್ಯಾರ್ಥಿಗಳನ್ನು ಸಂಘಟಿಸಿದ್ದಕ್ಕಾಗಿ ಸುಳ್ಳುಕೇಸುಗಳನ್ನು ಪೋಲೀಸರು ಅವರ ಮೇಲೆ ಹಾಕಿದ್ದರು. ಶೋಷಿತರ ಕಷ್ಟಗಳಿಗೆ ಭಾವನಾತ್ಮಕವಾಗಿ ಸ್ಪಂದಿಸುತ್ತಿದ್ದ ಕಾ॥ ದೇವಯ್ಯ ಕೇವಲ ಅಷ್ಟಕ್ಕೆ ಸುಮ್ಮನಾಗದೆ ಆ ಜನರ ಸಮಸ್ಯೆಗಳ ಮೂಲಭೂತ ಪರಿಹಾರಕ್ಕಾಗಿ ಶ್ರಮಿಸುತ್ತಿದ್ದರು. ಉತ್ತಮ ಹಾಡುಗಾರರಾಗಿದ್ದ ಅವರು ಹಾಡುಗಳನ್ನು ಜನರ ಎದೆಗೆ ತಟ್ಟುವಂತೆ ಹಾಡುತ್ತಿದ್ದರು. ತಿಳಿದುಕೊಳ್ಳುವ ಹಾಗೂ ಕಲಿಯುವ ಹಂಬಲ ಅವರಲ್ಲಿ ತೀವ್ರವಾಗಿತ್ತು. ರಾಜಕೀಯ ಗ್ರಹಿಕೆಯನ್ನು ಹೆಚ್ಚು ಮಾಡಿಕೊಳ್ಳುವ ಪ್ರಯತ್ನ ನಿರಂತರವಾಗಿ ಮಾಡುತ್ತಿದ್ದರು. ಓದುವುದು, ಬರೆಯುವುದು, ಚರ್ಚಿಸುವುದು, ಮನನ ಮಾಡಿಕೊಳ್ಳುವುದು ಅವರ ಎಂದಿನ ದಿನಚರಿಗಳಲ್ಲಿ ಒಂದಾಗಿತ್ತು. 2007ರಲ್ಲಿ ಪಕ್ಷದ ದಳಕ್ಕೆ ಸೇರ್ಪಡೆಯಾದ ದೇವಯ್ಯ ತೀವ್ರ ಅಲ್ಸರ್ ಹೊಟ್ಟೆ ನೋವಿನಿಂದ ಬಳಲುತ್ತಿದ್ದರೂ ದಳದ ಶಿಸ್ತು, ಮಿಲಿಟರಿ ಪರಿಣತಿ, ದಿನನಿತ್ಯ ವ್ಯಾಯಾಮಗಳನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದರು. ಯಾರೊಂದಿಗೂ ತನಗೆಲ್ಲಾ ತಿಳಿದಿದೆ ಎಂಬ ಭಾವನೆಯಿಂದ ವರ್ತಿಸದೆ ತಿಳಿದಿರುವುದನ್ನು ಹೇಳುವ, ತಿಳಿಯದೇ ಇರುವುದನ್ನು ಕಲಿಯುವ ಮುಕ್ತ ಸ್ವಭಾವ ಅವರಲ್ಲಿತ್ತು. ಅಧ್ಯಯನ ತರಗತಿಗಳಲ್ಲಿ ಆಸಕ್ತಿಯಿಂದ ತಮ್ಮನ್ನು ತೊಡಗಿಸಿಕೊಂಡು ಪ್ರಶ್ನೆಗಳ ಚರ್ಚೆಗಳ ಮೂಲಕ ತರಗತಿಯನ್ನು ಮತ್ತಷ್ಟು ವಿಸ್ತಾರಗೊಳಿಸುತ್ತಾ ಆಳವಾದ ವೈಚಾರಿಕ ವಿಚಾರಗಳಿಗೆ ತೆಗೆದುಕೊಂಡು ಹೋಗುತ್ತಿದ್ದರು. ಕಾ॥ ದೇವಯ್ಯ ಅಲ್ಪ ಅವಧಿಯಲ್ಲೆ ಸಂಗಾತಿಗಳ ಹಾಗೂ ಜನರ ಸ್ನೇಹವನ್ನು ಸಂಪಾದಿಸುತ್ತಿದ್ದರು. ಇಂತಹ ಅಪ್ರತಿಮ ಕ್ರಾಂತಿಕಾರಿಯನ್ನು ಪ್ರಭುತ್ವದ ಪಡೆ ನಿರ್ದಯವಾಗಿ ಕೊಂದು ಹಾಕಿದೆ.

## ಶೋಷಣೆಯಿಂದ ನಲುಗಿ ಸಮಾಜ ಬದಲಾವಣೆಗೆ ತುಡಿದ ಕಾಮ್ರೇಡ್ ರವಿ.

ಕಾ॥ ರವಿ ಕೂಲಿ ಕುಟುಂಬದಲ್ಲಿ ಹುಟ್ಟಿದವರು. ಮೂಡಿಗೆರೆಯ ಕಳಸ ಸಮೀಪದ ಹೆಮ್ಮಕ್ಕಿ ಬಳಿಯ ನಾಗಸಾಲ್ ಮಕ್ಕಿಯವರು. ದಲಿತ ಹಿನ್ನಲೆಯ ಅವರು ಕಣ್ಣೆದುರು ನಡೆಯುತ್ತಿದ್ದ ಶೋಷಣೆ ದೌರ್ಜನ್ಯವನ್ನು ಕಂಡು ಅವುಗಳ ಪರಿಹಾರಕ್ಕಾಗಿ ತಮ್ಮನ್ನು ತೊಡಗಿಸಿಕೊಳ್ಳಲಾರಂಭಿಸಿದ್ದರು. ಆರಂಭದಿಂದಲೂ ಅಲ್ಲಿ ನಡೆಯುವ ಜನರ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದ ಅವರು ಇತ್ತೀಚೆಗೆ ಮೂರು ತಿಂಗಳ ಮೊದಲು ಪಕ್ಷದ ಸಶಸ್ತ್ರದಳ ಸೇರುವ ಇಚ್ಛೆ ವ್ಯಕ್ತಪಡಿಸಿದ್ದರು. ಅವರು ಪಕ್ಷದ ದಳಕ್ಕೆ ಸೇರ್ಪಡೆ ಆದ ಕೆಲವೇ ದಿನಗಳಲ್ಲೇ ಪೋಲೀಸರ ಗುಂಡಿನ ದಾಳಿಗೆ ಒಳಗಾಗಿ ಜನರಿಗಾಗಿ ಗೆರಿಲ್ಲಾ ಕ್ರಾಂತಿಕಾರಿಯಾಗಿ ತಮ್ಮ ಪ್ರಾಣ ಅರ್ಪಿಸಿದರು. ಪ್ರಾಥಮಿಕ ವಿದ್ಯಾಭ್ಯಾಸ ಹೊಂದಿದ್ದ ಅವರು ವರ್ಗ ರಾಜಕೀಯದ ಗ್ರಹಿಕೆ ಹೊಂದಿದ್ದರು. ಆಗಷ್ಟೇ ದಳದ ಶಿಸ್ತುಗಳನ್ನು ಕಲಿಯುತ್ತಿದ್ದವರು.

ಈ ಮೂರು ಜನ ಅಮೂಲ್ಯ ಸಂಗಾತಿಗಳನ್ನು ಆಳುವ ವರ್ಗದ ಕ್ರೂರ ಪೋಲೀಸ್ ಪಡೆ ಕಗ್ಗೊಲೆ ಮಾಡುವ ಮೂಲಕ ಜನರಿಂದ ದೂರ ಮಾಡಲು ವ್ಯರ್ಥ ಪ್ರಯತ್ನ ನಡೆಸಿದೆ. ಆದರೆ ಜನರ ಎದೆಗಳಲ್ಲಿ ಈ ಮೂರು ಸಂಗಾತಿಗಳ ಆಶಯಗಳು, ಅವರು ಮಾಡಿದ ಅಪ್ರತಿಮ ತ್ಯಾಗ ಬಲಿದಾನಗಳು ತುಂಬಿವೆ. ಜನರ ಹೃದಯಗಳಲ್ಲಿರುವ ಅವುಗಳು ಮತ್ತಷ್ಟು ಕ್ರಾಂತಿಕಾರಿಗಳನ್ನು ಸೃಷ್ಟಿಸುತ್ತವೆ. ಹತ್ತಾರು ನೂರಾರು ಕ್ರಾಂತಿಕಾರಿ ಚೇತನಗಳು ಮೂಡಿ ಬರುತ್ತವೆ. ಶೋಷಿತರ ನೋವಿನ ಕಣ್ಣೀರುಗಳನ್ನು ಶಾಶ್ವತವಾಗಿ ಅಳಿಸಿ ಹಾಕುತ್ತವೆ.

ಕೆಂಪಯ್ಯನಂತಹ, ಮಿರ್ಜಿ, ಶ್ರೀ ಕುಮಾರ್ ರಂತಹ ಬಲಿತ ಹಾಗೂ ಕ್ರೂ ಕೊಲೆಗಡುಕ ಪೋಲಿಸ್ ಅಧಿಕಾರಿಗಳು, ಯಡಿಯೂರಪ್ಪ, ವಿ.ಎಸ್. ಆಚಾರ್ಯನಂತಹ ಅನಿಷ್ಟ ಕ್ರೂರ ಶೋಷಕ ರಾಜಕಾರಣಿಗಳು ಈ ಎಲ್ಲಾ ದುಷ್ಕೃತ್ಯಗಳ ಫಲ ಅನುಭವಿಸಬೇಕಾಗುತ್ತದೆ.

ಈ ಎಲ್ಲಾ ಸಂಗಾತಿಗಳನ್ನು ಹೆತ್ತ  ತಂದೆ-ತಾಯಂದಿರ ಕುಟುಂಬ ವರ್ಗದವರ ದುಃಖವನ್ನು ನಾವು ಹಂಚಿಕೊಳ್ಳುತ್ತೇವೆ. ಈ ಮೂರು ಅಮೂಲ್ಯ ಗೆರಿಲ್ಲಾ ಚೇತನಗಳನ್ನು ನಾಡಿನ ಜನರಿಗೆ ನೀಡಿದ ಅವರ ತಂದೆ-ತಾಯಿ ಹಾಗೂ ಕುಟುಂಬ ವರ್ಗಕ್ಕೆ ಸಿಪಿಐ (ಮಾವೋವಾದಿ) ಅಭಾರಿಯಾಗಿರುತ್ತದೆ. ಗಿಮ್ಮ ಜನಪರ ಸಜ್ಜನಿಕೆಯ ಮಕ್ಕಳನ್ನು ಕೊಂದು ಹಾಕಿದ ಕ್ರೂರ ಆಳುವ ವ್ಯವಸ್ಥೆ ಮತ್ತದೆ ಪಡೆಗಳ ಬಗ್ಗೆ ಸರಿಯಾಗಿ ಗ್ರಹಿಸಿ ಜನರೊಂದಿಗೆ ಹೋರಾಟಗಳಲ್ಲಿ ತೊಡಗಬೇಕೆಂದು ಅವರೆಲ್ಲರಲ್ಲೂ ಪಕ್ಷ ಈ ಮೂಲಕ ವಿನಂತಿ ಮಾಡುತ್ತಿದೆ.

**'ಪ್ರಜಾತಾಂತ್ರಿಕ' ಹೋರಾಟ ಮಾಡಿದ್ದರೆ ಈ ಗತಿ ಬರುತ್ತಿರಲಿಲ್ಲ ಎಂಬಂತೆ ಮಾತನಾಡುವವರು. ಪ್ರಜಾತಾಂತ್ರಿಕತೆಯ ಬಗ್ಗೆ ಸರಿಯಾಗಿ ಆಲೋಚಿಸಬೇಕೆಂದು ಕೋರುತ್ತಿದ್ದೇವೆ.** ನಮ್ಮ ದೇಶದಲ್ಲಿ ಪ್ರಜಾತಾಂತ್ರಿಕತೆ ಎಷ್ಟಿದೆ? ಹೇಗಿದೆ? ಎಲ್ಲಿದೆ? ಎಂಬುದರ ಬಗ್ಗೆ ಚರ್ಚೆ ನಡೆಯಬೇಕಿದೆ. ಜನರ ಶೋಷಣೆ ಮಾಡುತ್ತಾ ಬಂದೂಕುಗಳನ್ನು ಇಟ್ಟುಕೊಂಡು ಜನರಿಗೆ ಬೆದರಿಸುತ್ತಾ ಇರುವವರು, ಜನರನ್ನು ಸುಲಿದು ತಿನ್ನುತ್ತಾ ಮಾಫಿಯಾ ಸಾಮ್ರಾಜ್ಯ ನಡೆಸುತ್ತಿರುವವರು ಅಧಿಕಾರಿಗಳಾಗಿ ರಾಜಕಾರಣಿಗಳಾಗಿ ಐಷಾರಾಮಿ ಬಂಗಲೆಗಳಲ್ಲಿ ಇದ್ದುಕೊಂಡು ಎ.ಸಿ. ಕಾರುಗಳಲ್ಲಿ ರಾಜಾರೋಷವಾಗಿ ತಿರುಗಾಡಲು ಸಾಧ್ಯವೆಂದಾದರೆ ಅದು ಹೇಗೆ ಪ್ರಜಾತಾಂತ್ರಿಕ ವ್ಯವಸ್ಥೆ ಆಗಲು ಸಾಧ್ಯ? ನೂರಾರು ಸಾವಿರಾರು ಎಕರೆ ಭೂಮಿಯನ್ನು ತಮ್ಮ ಕೈಯಲ್ಲಿಟ್ಟುಕೊಂಡು ಸಾಮಾಜಿಕ ಹಿಡಿತ ಹೊಂದಿ ದುಡಿದುಣ್ಣುವ ಜನರನ್ನು, ಸಣ್ಣ ಮತ್ತು ಮಧ್ಯಮ ರೈತರನ್ನು ಶೋಷಿಸುತ್ತಿದ್ದರೆ ಅದ್ಹೇಗೆ ಪ್ರಜಾತಾಂತ್ರಿಕ ಲಕ್ಷಣವಾಗುತ್ತದೆ ? ಈ ಮೂರು ಸಂಗಾತಿಗಳು

ಕನಸು ಮನಸಿನಲ್ಲಿಯೂ ಜನರ ವಿರುದ್ಧ ಯೋಚಿಸಿದವರಲ್ಲ. ಯಾವುದೇ ಕ್ರಿಮಿನಲ್ ಹಿನ್ನಲೆಯವರೂ ಅಲ್ಲ. ಕೇವಲ ಕೋವಿ ಹಿಡಿದ ಕೂಡಲೇ ಕಗ್ಗೊಲೆ ಮಾಡುವುದು ಪ್ರಜಾತಾಂತ್ರಿಕ ಲಕ್ಷಣವೆ? ಹಾಗಿದ್ದರೆ ಸಮಾಜದ ಲೂಟಿಕೋರರಿಗೆ ಅದು ಯಾಕೆ ಅನ್ವಯಿಸುತ್ತಿಲ್ಲ? ತತ್ಕೊಳದ ಜನರನ್ನು ಅವರ ಮೂಲನೆಲೆಯಿಂದ ಒಕ್ಕಲೆಬ್ಬಿಸಿ ಸಾಮ್ರಾಜ್ಯ ಶಾಹಿ ಹಿತಾಸಕ್ತಿಗೆ ಕಾಡು ಹಾಗೂ ನಾಡನ್ನು ಒತ್ತೆ ಇಡುವುದು ಪ್ರಜಾತಾಂತ್ರಿಕತೆಯೆ? ಇದನ್ನು ವಿರೋಧಿಸಿ ವರ್ಷಾನುಗಟ್ಟಲೆ ಮೂಡಿಗೆರೆ, ಚಿಕ್ಕಮಗಳೂರು, ಬೆಂಗಳೂರಿನ ಬೀದಿಗಳಲ್ಲಿ ಪ್ರತಿಭಟಿಸಿ ಅಲೆದಾಡಿ ಕೊನೆಗೆ ನಾಯಿ ದನಗಳೊಂದಿಗೆ ಮನೆಮಂದಿಯೆಲ್ಲಾ ತಹಸೀಲ್ದಾರ್ ಕಛೇರಿ ಮುಂದೆ ಬೀಡು ಬಿಟ್ಟರೂ ಕೊನೆಗೆ ಬಲಾತ್ಕಾರದಿಂದ  ಒಕ್ಕಲೆಬ್ಬಿಸಿ ಸರಿಯಾದ ಪರ್ಯಾಯ ವ್ಯವಸ್ಥೆ ಮಾಡದಿರುವುದು ಪ್ರಜಾತಾಂತ್ರಿಕತೆಯೆ? ಹೊಟ್ಟೆ ಸಂಕಟದಿಂದ ತಮ್ಮ ಮೇಲೆ ಬೀಳುತ್ತಿರುವ ತೀವ್ರ ರೀತಿಯ ಏಟುಗಳಿಂದ ರೋಷತಪ್ತರಾದ ಜನರು ಬಂದೂಕು ಹಿಡಿದ ಕೂಡಲೇ ಅದು ಅಪ್ರಜಾತಾಂತ್ರಿಕ ಎಂದು ತೀರ್ಪು ನೀಡುವುದು ಪ್ರಜಾತಾಂತ್ರಿಕವೇ? ಅದು ಜನಸಾಮಾನ್ಯರ ಪರ ಧೋರಣೆಯಾಗಲು ಸಾಧ್ಯವೆ. ಕೋವಿ ಹಿಡಿದಿದ್ದ ಕಾ॥ ಮನೋಹರ, ಕಾ॥ ದೇವಯ್ಯ ಹಾಗೂ ಕಾ॥ ರವಿ ಅಪ್ರಜಾತಾಂತ್ರಿಕರು ಎನ್ನುವುದು ಆ ಮಹಾನ್ ಚೇತನಗಳಿಗೆ ಮಾಡುವ ಅಪಚಾರವಲ್ಲವೇ? ಅದೇ ವೇಳೆ ಹೀಗೆಲ್ಲ ಹೇಳುವ ಮೂಲಕ ಸರ್ಕಾರಿ ಕೊಲೆಗಳನ್ನೂ ಸಮರ್ಥಿಸಿ ಪ್ರೋತ್ಸಾಹಿಸಿದಂತಾಗುವುದಿಲ್ಲವೇ? ಎನ್‌ಕೌಂಟರು ಗಳಲ್ಲಿ ಸಾಯುವ ನಕ್ಸಲೈಟರು ಹಾಗೂ ಪೊಲೀಸ್ ಪೇದೆಗಳು ಬಡವರೇ, ಹಾಗಾಗಿ ಬಡವರ ಜೀವಗಳೇ ಈ ಚಳುವಳಿಗಳಲ್ಲಿ ಹೋಗುತ್ತಿರುವುದು. ಹಾಗಾಗಿ ಸಶಸ್ತ್ರ ಹೋರಾಟ ಬಡಜನರಿಗೇ ಮಾರಕ ಎಂಬಂತೆ ಕೆಲವರು ಮಾತಾಡುತ್ತಿರುವುದು ಶೋಷಕರ ಪರವಾಗಿ ಕೆಲಸ ಮಾಡುತ್ತಿರುವ ನಕ್ಸಲೈಟ್ ಕ್ರಾಂತಿಕಾರಿಗಳನ್ನು ಒಂದೇ ತಕ್ಕಡಿಯಲ್ಲಿ ಇಟ್ಟು ನೋಡುವ ತಪ್ಪಾದ ಚಿಂತನೆಯಾಗಿದೆ. ಇದು ವರ್ಗಶೋಷಣೆಯನ್ನು ಹೋಗಲಾಡಿಸಲು ಯಾವುದೇ ರೀತಿಯಿಂದಲೂ ಸಹಾಯ ಮಾಡುವುದಿಲ್ಲ. ಬದಲಿಗೆ ಶೋಷಕರಿಗೆ ಸಹಾಯ ಮಾಡುವಂತಹವುಗಳಾಗಿವೆ.

ನಾಡಿನ ಬುದ್ಧಿ ಜೀವಿಗಳು ಪ್ರಜಾತಂತ್ರವಾದಿಗಳು ಜನಪರ ಸಂಘಟನೆ ಹಾಗೂ ವ್ಯಕ್ತಿಗಳು ಆಳುವ ವರ್ಗಗಳು ಮತ್ತದರ ಸರ್ಕಾರಗಳು, ಪೊಲೀಸ್ ಇತ್ಯಾದಿ ಪಡೆಗಳು ನಡೆಸುತ್ತಿರುವ ಕ್ರೂರ ಶೋಷಣೆ ದಬ್ಬಾಳಿಕೆ ಅಪ್ರಜಾತಾಂತ್ರಿಕ ಕೃತ್ಯಗಳನ್ನು ಖಂಡಿಸಿ ನಿಜವಾದ ಬಹುಸಂಖ್ಯಾತ ಜನರ ಪರವಾಗಿರುವ ಪ್ರಜಾತಂತ್ರವನ್ನು ಎತ್ತಿಹಿಡಿಯಬೇಕಾಗಿ ಕೋರುತ್ತಿದ್ದೇವೆ. ತಮ್ಮ ಪ್ರತಿಕ್ರಿಯೆಗಳು ಆಳುವ ಜನರಿಗೆ ಶೋಷಕರಿಗೆ ಲೂಟಿಕೋರರಿಗೆ ಯಾವುದೇ ರೀತಿಯಲ್ಲೂ ಸಹಾಯಕವಾಗದಂತೆ ನೋಡಿಕೊಳ್ಳಬೇಕೆಂದು ವಿನಂತಿಸುತ್ತಿದ್ದೇವೆ.

ಸಿಪಿಐ (ಮಾವೋವಾದಿ) ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ತಮ್ಮ ಪ್ರಾಣವನ್ನು ಜನರಿಗಾಗಿಯೇ ಮೀಸಲಿಟ್ಟಂತಹವರು. ಅವರು ಎಲ್ಲವನ್ನೂ ತೊರೆದು ಕೇವಲ ಜನರಿಗಾಗಿ, ಸಮಸಮಾಜದ ನಿರ್ಮಾಣಕ್ಕಾಗಿ ತಮ್ಮನ್ನು ತೊಡಗಿಸಿಕೊಂಡವರು, ಅವರು ಬಹುಸಂಖ್ಯಾತ ಶೋಷಿತ ಜನರ ಪ್ರತಿನಿಧಿಗಳು ಸಾವಿನ ಜೊತೆ ಸಂಗೀತ ಹಾಡುತ್ತಾ ಶೋಷಿತ ಜನರ ಪರ್ಯಾಯ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸುತ್ತಿರುವವರು. ಇಂತಹ ಮಹಾನ್ ಚೇತನಗಳನ್ನು ಆಳುವ ಸರ್ಕಾರಗಳು ಕಗ್ಗೊಲೆ ಮಾಡುತ್ತಿರುವಾಗ ನೋಡಿಕೊಂಡು ಸುಮ್ಮನಿರುವುದು ಅಥವಾ ಅವರ ಕೆಲಸವನ್ನೇ ಹೀಗಳೆಯುವುದು ಜನಪರವೆನಿಸಿಕೊಳ್ಳುವುದಿಲ್ಲ. ನಾಡಿನ ಪ್ರಜ್ಞಾವಂಚಿತರು ಇಂತಹ ಕಗ್ಗೊಲೆಗಳನ್ನು ಖಂಡಿಸಿ ಹೋರಾಡಬೇಕಾದುದು ಅವರೆಲ್ಲರ ಜವಾಬ್ದಾರಿಯಾಗಿದೆ. ನಕ್ಸಲ್ ಹುತಾತ್ಮಕರು ಎತ್ತಿರುವ ಪ್ರಶ್ನೆಗಳು ಮತ್ತು ಅವರ ಆಶಯಗಳನ್ನು ಅರ್ಥ ಮಾಡಿಕೊಂಡು ಎತ್ತಿ ಹಿಡಿಯಬೇಕಾದುದು ಜನಪರ ಶಕ್ತಿಗಳ ಕರ್ತವ್ಯವಾಗಿದೆ.

## *ಪ್ರಜಾನಾಯಕರು ಮೃತ್ಯುಂಜಯರು*
## *ಕ್ರಾಂತಿಕಾರಿ ಹೋರಾಟಕ್ಕೆಂದೂ ಸಾವಿಲ್ಲ*

ನಮ್ಮ ನಿಮ್ಮೆಲ್ಲರ ಆತ್ಮೀಯ ಪ್ರೀತಿಪಾತ್ರ ಸಂಗಾತಿಗಳಾಗಿದ್ದ ಕಾ॥ ಮನೋಹರ್, ಕಾ॥ ದೇವಯ್ಯ, ಕಾ॥ ರವಿ ನಮ್ಮೆಲ್ಲರ ಹೃದಯಗಳಲ್ಲಿ ನಿತ್ಯವೂ ಬೆಳಕು ಬೀರುತ್ತಾ ಇರುತ್ತಾರೆ. ಅವರು ಸಾವನ್ನು ಜಯಿಸಿದವರು, ಅವರ ಹೋರಾಟಕ್ಕೂ ಸಾವಿಲ್ಲ, ಅವರ ಆಶಯಗಳನ್ನು ಕೊಲ್ಲಲಾಗುವುದಿಲ್ಲ. ಅವರ ಆಶಯಗಳ ಈಡೇರಿಕೆಗಾಗಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರುತ್ತಾರೆ. ಸಮಸಮಾಜದ ಅವರ ಆಶಯಗಳನ್ನು ಈಡೇರಿಸಲು ಜನರು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರುತ್ತಾರೆ. ಅವರ ಆಶಯಗಳನ್ನು ಸಾಕಾರಗೊಳಿಸುತ್ತಾರೆ. ಪಕ್ಷ ಅದಕ್ಕಾಗಿಯೇ ಜನರೊಂದಿಗೆ ಇರುತ್ತದೆ. ದೇಶಾದ್ಯಂತ ನಮ್ಮ ಪಕ್ಷದ ನಾಯಕತ್ವದಲ್ಲಿ ಬೆಳೆಯುತ್ತಿರುವ ಕ್ರಾಂತಿಕಾರಿ ಚಳುವಳಿ ಛತ್ತೀಸ್‌ಗಢ, ದಂಡಕಾರಣ್ಯಗಳಲ್ಲಿ ಬೆಳೆಯುತ್ತಿರುವ ಜನರ ಪರ್ಯಾಯ ಕ್ರಾಂತಿಕಾರಿ ಅಧಿಕಾರ ಇವೆಲ್ಲದರ ಮೈಲಿಗಲ್ಲಾಗಿವೆ. ನಂದಿಗ್ರಾಮ ಸಿಂಗೂರ್‌ಗಳು ಬರಲಿರುವ ಪ್ರಜಾಚಳುವಳಿಗಳ ಉಬ್ಬರದ ಸೂಚನೆಗಳಾಗಿವೆ.

*ಈ ಮಹಾನ್ ಕ್ರಾಂತಿಕಾರಿ ಚೇತನಗಳಿಗೆ ಹೃದಯಪೂರ್ವಕ ಶ್ರದ್ಧಾಂಜಲಿ ಅರ್ಪಿಸೋಣ.*

*ಕ್ರಾಂತಿಕಾರಿ ಹೋರಾಟವನ್ನು ಮತ್ತಷ್ಟು ವಿಶಾಲಗೊಳಿಸುತ್ತಾ ತೀವ್ರಗೊಳಿಸೋಣ.*

*ಕಾ॥ ಮನೋಹರ್ ಕಾ॥ ರವಿ ಅಮರ್ ರಹೇ*

ಕ್ರಾಂತಿಕಾರಿ ವಂದನೆಗಳೊಂದಿಗೆ,

ರಾಜ್ಯ ಸಮಿತಿ
ಸಿಪಿಐ (ಮಾವೋವಾದಿ)
ಕರ್ನಾಟಕ

ಡಿಸೆಂಬರ್-7,2008